ಮೊತ್ತ		**9**	**820 00**
ಉಡುಪಿ	ಬ್ರಹ್ಮಾವರ	1	60 00
	ಬೈಂದೂರು	1	70 00
	ಕಾರ್ಕಳ	1	60 00
	ಕಾಪು	1	60 00
	ಕುಂದಾಪುರ	2	150 00
	ಉಡುಪಿ	1	60 00
ಮೊತ್ತ		**7**	**460 00**
ಉತ್ತರ ಕನ್ನಡ	ಅಂಕೋಲಾ	2	160 00
	ಭಟ್ಕಳ್	1	100 00
	ಹಳಿಯಾಳ	1	70 00
	ಕಾರವಾರ	1	80 00
	ಕುಮುಟಾ	1	60 00
	ಸಿರಸಿ	1	100 00
ಮೊತ್ತ		**7**	**570 00**
ಒಟ್ಟು ಮೊತ್ತ		**245**	**20848 65**

1459 (1599) ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಬೆಂಗಳೂರು, ಮೈಸೂರು ಮುಂತಾದ ಮಹಾನಗರಗಳಲ್ಲಿ ನಾಯಿ ಕಚ್ಚಿರುವ ಮತ್ತು ಅದರಿಂದ ಸತ್ತವರ ಸಂಖ್ಯೆ ಎಷ್ಟು,

ಆ) ಸತ್ತವರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆಯೇ,

ಇ) ಬೀದಿ ನಾಯಿಗಳ ಈ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಯಾವ ಯಾವ ಕ್ರಮಕೈಗೊಂಡಿದೆ,

ಈ) ಪ್ರಾಣಿಗಳ ಎ ಬಿ ಸಿ ಯೋಜನೆಗಾಗಿ ಯಾವ ಯಾವ ಸರ್ಕಾರೇತರ ಸಂಸ್ಥೆಗಳಿಗೆ ವಿಶೇಷ ಹಣವನ್ನು ಇದುವರೆವಿಗೂ ಮಂಜೂರು ಮಾಡಲಾಗಿದೆ (ಸಂಸ್ಥೆಗಳವಾರು ಮತ್ತು ಹಣವಾರು ವಿವರ ನೀಡುವುದು),

ಉ) ಸರ್ಕಾರ ನೀಡಿದಂತಹ ಹಣವನ್ನು ಸಂಸ್ಥೆಗಳು ಯಾವ ಯಾವ ಬಾಬ್ತುಗಳಿಗೆ ವೆಚ್ಚ ಮಾಡಿವೆ (ಬಾಬ್ತುವಾರು ವಿವರ ನೀಡುವುದು) ,

ಊ) ಈ ಸಂಸ್ಥೆಗಳಿಗೆ ನೀಡಿದ ಹಣ ಮತ್ತು ಮಾಡಿದ ವೆಚ್ಚಗಳ ಬಗ್ಗೆ ಆಡಿಟ್ ಮಾಡಲಾಗಿದೆಯೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ)

ಅ) ಮುಖ್ಯವಾಗಿ ಬೆಂಗಳೂರು ಮತ್ತು ಮೈಸೂರು ಮಹಾನಗರ ಪಾಲಿಕೆಗಳು ಮುಂತಾದ ಮಹಾನಗರಗಳ ವ್ಯಾಪ್ತಿಯಲ್ಲಿ 2001 ರಿಂದ 2007 ಫೆಬ್ರುವರಿಯವರೆಗೆ ಬೆಂಗಳೂರಿನಲ್ಲಿ 1,41,694, ಮತ್ತು ಮೈಸೂರಿನಲ್ಲಿ 8,225 ಜನ ನಾಯಿ ಕಡಿತಕ್ಕೊಳಗಾಗಿರುತ್ತಾರೆ ಇದರಲ್ಲಿ ಬೆಂಗಳೂರಿನಲ್ಲಿ ಇಬ್ಬರು (2) ಮರಣ ಹೊಂದಿರುತ್ತಾರೆ ಮಂಗಳೂರಿನಲ್ಲಿ 4 ಜನ ಮರಣ ಹೊಂದಿರುತ್ತಾರೆ

ಆ) ಒಂದು ಕುಟುಂಬಕ್ಕೆ ರೂ 1 00 ಲಕ್ಷದಂತೆ ಒಟ್ಟು 2 ಕುಟುಂಬಗಳಿಗೆ ರೂ 2 00 ಲಕ್ಷಗಳ ಪರಿಹಾರವನ್ನು ನೀಡಲಾಗಿರುತ್ತದೆ ಮಂಗಳೂರುನಲ್ಲಿ ಪರಿಹಾರ ನೀಡಿಲ್ಲ

ಇ) ಬೀದಿ ನಾಯಿಗಳ ನಿಯಂತ್ರಣಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಎ ಬಿ ಸಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತದೆ ಈ ಕಾರ್ಯಕ್ರಮದಡಿಯಲ್ಲಿ ನಗರದಲ್ಲಿ ನಾಲ್ಕು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಪಶುಪಾಲನಾ ಇಲಾಖೆಯ

ಸಹಕಾರದೊಂದಿಗೆ ಬೀದಿನಾಯಿಗಳು ಹಿಡಿದು ಸಂತಾನ ಹರಣ ಶಸ್ತ್ರ ಚಿಕಿತ್ಸೆಗೊಳಪಡಿಸಿ, 5 ರಿಂದ 7 ದಿನಗಳವರೆಗೆ ಶಸ್ತ್ರ ಚಿಕೆತ್ಸೆಯ ನಂತರ ಶುಶ್ರೂಷೆ ಮಾಡಿ ರೇಬೀಸ್ ನಿರೋಧಕ ಲಸಿಕೆ ನೀಡಿ, ಒಳ ಮತ್ತು ಹೊರ ಪರೋಪ ಜೀವಿಗಳಿಗೆ ವಿರುದ್ಧ ಚಿಕಿತ್ಸೆ ನೀಡಿ ನಂತರ ಹಿಡಿದು ತರಲಾದ ಸ್ಥಳದಲ್ಲಿಯೇ ಬಿಡುಗಡೆ ಮಾಡಲಾಗುತ್ತದೆ ಈ ಯೋಜನೆಯಡಿ ವಾಸಿಯಾಗಲಾರದ ಖಾಯಿಲೆ ಇರುವ ನಾಯಿಗಳು ಶಾಶ್ವತ ಹಾನಿಗೊಳಗಾಗಿರುವ ನಾಯಿಗಳು ಮತ್ತು ಸಮಸ್ಯಾತ್ಮಕ ನಾಯಿಗಳನ್ನು ಎ ಬಿ ಸಿ ಕಾಯ್ದೆಯಡಿಯಲ್ಲಿ ನಿಯಮಾನುಸಾರ ದಯಾಮರಣಕ್ಕೆ ಒಳಪಡಿಸಲಾಗುತ್ತದೆ ಮೈಸೂರಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಹಣ ನೀಡಿರುವುದಿಲ್ಲ ಪಶುಸಂಗೋಪನಾ ಇಲಾಖೆಯ ಮೂಲಕ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ ಮತ್ತು ರೂ 1,45,000/–ಗಳನ್ನು ಈ ಕಾರ್ಯಕ್ರಮಕ್ಕೆ ಖರ್ಚು ಮಾಡಲಾಗಿದೆ

ಈ) ಸರ್ಕಾರೇತರ ಸಂಸ್ಥೆಗಳಿಗೆ ಪ್ರಾಣಿಗಳ ಎ ಬಿ ಸಿ ಯೋಜನೆಗಾಗಿ ವಿಶೇಷ ಹಣವೆಂದು ಇದೂವರೆಗೂ ಮಂಜೂರು ಮಾಡಿರುವುದಿಲ್ಲ ಆದರೆ ಪಾಲಿಕೆಯು ಆಯವ್ಯಯದಲ್ಲಿ ಬೀದಿನಾಯಿಗಳ ನಿಯಂತ್ರಣಕ್ಕಾಗಿ ಮೀಸಲಿಟ್ಟಿರುವ ಮೊತ್ತದಿಂದ ಈ ಕೆಳಕಂಡಂತೆ ಸರ್ಕಾರೇತರ ಸಂಸ್ಥೆಗಳಿಗೆ ಹಣವನ್ನು ಪಾವತಿಸಲಾಗಿದೆ

ವರ್ಷ	ಸಂಸ್ಥೆಯ ಹೆಸರು	ಪಾವತಿಸಿದ ಮೊತ್ತ
2001–2002	ಕ್ಯೂಪಾ	1682800 00
	ಕರುಣಾ	1092000 00
	ಎ ಆರ್ ಎಫ್	2358600 00
2002–2003	ಕ್ಯೂಪಾ	2978825 00
	ಕರುಣಾ	2184000 00
	ಎ ಆರ್ ಎಫ್	2751700 00

2003–2004	ಕ್ಯೂಪಾ	4196983 00
	ಕರುಣಾ	1886000 00
	ಎ ಆರ್ ಎಫ್	2765960 00
2003–2004	ಕ್ಯೂಪಾ	1104600 00
	ಎ ಎಸ್ ಟಿ	1360510 00
2004–2005	ಕ್ಯೂಪಾ	4717795 00
	ಕರುಣಾ	3042680 00
	ಎ ಆರ್ ಎಫ್	3927910 00
	ಕೃಪಾ	2426070 00
2005–06	ಕ್ಯೂಪಾ	4702310 00
	ಕರುಣಾ	3232880 00
	ಎ ಆರ್ ಎಫ್	4048670 00
	ಕೃಪಾ	1570710 00
2006–07	ಕ್ಯೂಪಾ	2341280 00
(ಸೆಪ್ಟೆಂಬರ್–	ಕರುಣಾ	1413360 00
06 ವರೆಗೆ)	ಎ ಡಆರ್ ಎಫ್	1702770 00
	ಕೃಪಾ	964250 00

ಊ) ಪಾಲಿಕೆಯು ನೀಡಿದಂತಹ ಹಣವನ್ನು ಸಂಸ್ಥೆಗಳು ಈ ಕೆಳಕಂಡ ಬಾಬ್ತುಗಳಿಗೆ ವೆಚ್ಚ ಮಾಡಿರುತ್ತವೆ

1) ಸಂತಾನಹರಣ ಶಸ್ತ್ರ ಚಿಕಿತ್ಸೆ

ದರಗಳು ಒಂದಕ್ಕೆ

ರೂ ಗಳಲ್ಲಿ

ಕ್ರ.ಸಂ	ಸಂಸ್ಥೆಯ ಹೆಸರು	ಗಂಡು	ಹೆಣ್ಣು
1	ಕ್ಯೂಪಾ	375	395
2	ಕರುಣಾ	400	420
3	ಎ ಆರ್ ಎಫ್	400	420
4	ಕೃಪಾ	410	430

2) ಆಂಟಿರೇಬೀಸ್ ಲಸಿಕೆ – ಒಂದು ನಾಯಿಗೆ ರೂ 40/– ರಂತೆ

3) ದಯಾ ಮರಣಕ್ಕೊಳಪಡಿಸುವುದು – ಒಂದು ನಾಯಿಗೆ ರೂ 60/– ರಂತೆ

ಊ) ಈ ಸಂಸ್ಥೆಗಳಿಗೆ ನೀಡಲಾದ ಹಣ ಮತ್ತು ವೆಚ್ಚಗಳ ಬಗ್ಗೆ ದಿನಾಂಕ 31 3 2006 ರವರೆಗೆ ಆಡಿಟ್ ಮಾಡಲಾಗಿದೆ

1460 (1659) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದಲ್ಲಿ ಸಾರಿಗೆ ಇಲಾಖೆಯಿಂದ ಆಟೋ ಪರವಾನಗಿ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದಲ್ಲಿ, ಪರವಾನಿಗೆ ನೀಡುವ ಯೋಚನೆ ಸರ್ಕಾರಕ್ಕೆ ಇದೆಯೇ,

ಇ) ಇದನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು,

ಈ) ಕಳೆದ ಮೂರು ವರ್ಷಗಳಲ್ಲಿ ತುಮಕೂರು ನಗರದ ಸ್ವಾತಂತ್ರ್ಯ ಹೋರಾಟಗಾರು, ಮಾಜಿ ಸೈನಿಕರು, ಹಿರಿಯ ನಾಗರೀಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ನೀಡಲಾಗಿರುವ ಆಟೋ ಪರವಾನಿಗಿಗಳು ಎಷ್ಟು? (ವಿವರ ನೀಡುವುದು)

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು).

ಅ) ಹೌದು